ಕಾರ್ಯಕ್ರಮಗಳಿಗಾಗಿ ಟೆಂಡರನ್ನು ಕರೆದ ಮೇಲೂ ಸರ್ಕಾರದ ತಟಸ್ಥ ದೋರಣೆಯಿಂದ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅರಂತೋಡು ಸೇತುವೆಗೆ ೧೯೬೬ರಲ್ಲಿಯೇ ಶಿಲಾನ್ಯಾಸ ಮಾಡಿದ್ದರಿಂದ ಜನರು ಬಹಳ ಸಂತೋಷಪಟ್ಟಿದ್ದರು. ಆದರೆ ಇಲ್ಲಿಯವರೆಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳದಿರುವುದರಿಂದ ಬಹಳ ನಾಚಿಕೆ ಪಡುವ ಪರಿಸ್ಥಿತಿಯಾಗಿದೆ. ೨೦ ಲಕ್ಷರೂಪಾಯಿ ತಗಲುವ ಈ ಕಾಮಗಾರಿಗೆ ಸರ್ಕಾರದವರು ಕೇವಲ ೫೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಈಗಾಗಲೇ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಈ ಕಾಮಗಾರಿಗೆ ಬಜೆಟ್‌ನಲ್ಲಿ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರದವರು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಈ ಎಲ್ಲ ಕೆಲಸಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿದ್ದೇವೆ. ನಿಯಮದ ಪ್ರಕಾರ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟು ಹಣವನ್ನು ಒದಗಿಸಿ ಕೊಡಲು ಪಟ್ಟಿ ಮಾಡಿಸುತ್ತೇನೆ. ಅವರಿಗೆ ಹೆಚ್ಚಿಗೆ ಹಣವನ್ನು ಕೊಡಲು ಸರ್ಕಾರದಲ್ಲಿ ಯಾವುದೇ ಡಿಸ್ಕ್ರಿಷನರಿ ಗ್ರಾಂಟ್ ಇಲ್ಲ. ಆದ್ದರಿಂದ ಆ ಕೆಲಸವನ್ನು ಮಾಡತಕ್ಕಂಥ ಹೊಣೆಗಾರಿಕೆ ಅವರ ಮೇಲೆ ಬಿದ್ದಿದೆ. ಈ ಬಗ್ಗೆ ಜಿಲ್ಲಾ ಪರಿಷತ್ತಿಗೆ ಪತ್ರವನ್ನು ಬರೆಯುತ್ತೇನೆಯೇ ಹೊರತು ಸರ್ಕಾರ ಡೈರೆಕ್ಟಾಗಿ ಹಣವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಜಿಲ್ಲಾ ಪರಿಷತ್‌ಗಳಿಗೆ ತಾವು ಕೊಟ್ಟಿರುವ ಹಣ ಯಾವ ಭಾಗಕ್ಕೂ ಸಾಲುವುದಿಲ್ಲ. ಈ ಹಣದಲ್ಲಿ ಬಹುಭಾಗ ಸಿಬ್ಬಂದಿ ಪಗಾರ್‌ಗೆ ಹೋಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್‌ಗಳಿಗೆ ಯಾವ ರೀತಿ ಹಣವನ್ನು ಕೊಡಬೇಕು ಎನ್ನುವ ಬಗ್ಗೆ ನಿಯಮಾವಳಿಗಳನ್ನು ರೂಪಿಸಿದ್ದೇವೆ. ಪರ್‌ಕ್ಯಾಪಿಟಾ ಎಷ್ಟು ಹಣ ಕೊಡಬೇಕು ಎನ್ನುವ ಎಲ್ಲವಿವರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಡೆವೆಲಪ್‌ಮೆಂಟ್ ಗ್ರಾಂಟ್ಸ್ ಎಷ್ಟು ಬರುತ್ತದೆ ಅದರಲ್ಲಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವ ನಿರ್ಣಯವನ್ನು ಮಾಡತಕ್ಕಂಥದ್ದು ಸ್ಥಳೀಯ ಮುಖಂಡರುಗಳು ಮಾಡತಕ್ಕ ಒಂದು ನಿರ್ಣಯಕ್ಕೆ ಸೇರಿದೆ. ಒಂದು ವೇಳೆ ಅವರು ಈ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕು ಆ ಕೆಲಸವನ್ನು ಇನ್ನು ಸ್ವಲ್ಪದಿವಸ ತಳ್ಳಬೇಕೆಂದು ನಿರ್ಣಯ ತೆಗೆದುಕೊಂಡರೆ ನಾವು ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೂ ನಾನು ಅವರಿಗೆ ಈ ಬಗ್ಗೆ ಪತ್ರ ಬರೆಯುತ್ತೇನೆ.

## ಪ್ರಾಥಮಿಕ ಶಾಲ ಶಿಕ್ಷಕರ ನೇಮಕಾತಿ ಬಗ್ಗೆ

೯೩೬. (೨೮೫೧) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ? ಹಾಗೂ, ಅವುಗಳು ಎಷ್ಟು ದಿನಗಳಿಂದ ಖಾಲಿ ಇವೆ ?

ಆ) ೧೯೬೮-೬೯ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ೪ ತಿಂಗಳು ಕಳೆದರೂ ಸಹ ಶಿಕ್ಷಕರ ನೇಮಕಾತಿಯನ್ನು ಮಾಡದೇ ಇರುವುದಕ್ಕೆ ಕಾರಣವೇನು ?

ಇ) ಈ ನೇಮಕಾತಿಗಳನ್ನು ಇನ್ನು ಎಷ್ಟು ದಿನಗಳಲ್ಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಂ. ಚಂದ್ರಶೇಖರಿಯ್ (ಶಿಕ್ಷಣ ಮಂತ್ರಿಗಳು).—

ಅ) ೧) ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ: ೮೩೬೧.

೨) ಇವು ಸುಮಾರು ೩ ವರ್ಷಗಳಿಂದಲೂ ಖಾಲಿ ಇವೆ.

೩) ಈ ಖಾಲಿ ಹುದ್ದೆಗಳ ಪೈಕಿ, ೩೫೫೪ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ.

ಆ) ನಿರುದ್ಯೋಗಿ, ಟಿ. ಸಿ. ಪೆಚ್. ತರಬೇತಿ ಪಡೆದವರು ನೇಮಕಾತಿಯಲ್ಲಿ ಗರಿಷ್ಟ ವಯೋಮಿತಿಯನ್ನು ಹೆಚ್ಚಿಸಬೇಕೆಂದು ಜಳುವಳಿ ಹೂಡಿರುವುದರಿಂದ ನೇಮಕಾತಿ ಮಾಡಲಾಗಲಿಲ್ಲ.

ಇ) ಪ್ರಸ್ತುತ ಖಾಲಿ ಹುದ್ದೆಗಳ ಸಂಖ್ಯೆಯ ಶೇಕಡ ೫೦ ರಷ್ಟನ್ನು ಸಧ್ಯದ ನಿಯಮಾವಳಿ ಪ್ರಕಾರ ಆಯ್ಕೆ ಮಾಡಿ ನೇಮಕಾತಿ ಮಾಡಿಕೊಳ್ಳಲು ಆದೇಶ ನೀಡಲಾಗಿದೆ. ಉಳಿದ ಖಾಲಿ ಹುದ್ದೆಗಳನ್ನು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತಂದು ಭರ್ತಿ ಮಾಡಲಾಗುವುದು.

ಚುಕ್ಕಿ ಪ್ರಶ್ನೆ (ಉತ್ತರ)

ಅಧ್ಯಕ್ಷರು.—ಈ ಪ್ರಶ್ನೆಯನ್ನು ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಕೇಳಬಹುದು,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವ ಪ್ರಕಾರ ಸುಮಾರು ೮೩೬೦ ಶಿಕ್ಷಕರ ಹುದ್ದೆಗಳು ತಾವು ಬಂದಾಗಿನಿಂದ ಅಂದರೆ ಸುಮಾರು ಮೂರು ವರ್ಷಗಳಿಂದ ಖಾಲಿ ಇರುತ್ತವೆ. ಇದರಲ್ಲಿ ಕೇವಲ ಸುಮಾರು ೩೫೫೪ ಉಪಾಧ್ಯಾಯರುಗಳು ಮಾತ್ರ ಕಾಂಟ್ರಾಕ್ಟ್ ಬೇಸಿಸ್‌ಮೇಲೆ ಕೆಲಸ ಮಾಡುತ್ತಿದ್ದಾರೆಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ. ಉಳಿದ ನಾಲ್ಕು ಸಾವಿರ ಹುದ್ದೆಗಳ ಬಗ್ಗೆ ಯಾವ ಯಾವ ಶಾಲೆಗಳಲ್ಲಿ ಏನೇನು ವ್ಯವಸ್ಥೆಯನ್ನು ಮಾಡಿದ್ದೀರಿ? ಉಪಾಧ್ಯಾಯರುಗಳಿಲ್ಲದೆ ಶಾಲೆಗಳನ್ನು ನಡೆಸಲು ಸಾಧ್ಯವೇ ಉಪಾಧ್ಯಾಯರುಗಳಿಲ್ಲದೆ ಶಾಲೆಗಳು ಯಾವ ರೀತಿ ನಡೆಯಲು ಸಾಧ್ಯವೆನ್ನುವುದನ್ನು ಹೇಳಬೇಕು ? ಎರಡನೆಯದಾಗಿ, ಈಗ

೧೧-೩೦ ಪಿ. ಎಂ.

ಳ ಸಾವಿರ ಹುದ್ದೆಗಳು ಏನು ಖಾಲಿ ಇವೆ ಮತ್ತು ನಿವೃತ್ತಿಯಿಂದಾಗಿ ಏನು ಖಾಲಿಯಾಗುತ್ತವೆ ಅವೆಲ್ಲವನ್ನು ಎಷ್ಟು ದಿನಗಳಲ್ಲಿ ತುಂಬುತ್ತೀರಿ ? ೫೦ ಪರ್ಸೆಂಟ್ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ರೂಲ್ಸ್ ಅಮೆಂಡ್ ಮಾಡುತ್ತಿದ್ದೇವೆಂದು ಹೇಳಿದಿರಿ. ರೂಲ್ಸ್ ಅಮೆಂಡ್ ಮಾಡಬೇಕಾದರೆ ಎಷ್ಟು ದಿನ ಹಿಡಿಯುತ್ತದೆ ? ಅದು ಈಗ ಯಾವ ಹಂತದಲ್ಲಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಈಗಾಗಲೇ ಹೇಳಿದ ಹಾಗೆ ಒಟ್ಟು ೮೩೬೦ರಲ್ಲಿ ೩೫೫೪ ಮಂದಿ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮಿಕ್ಕ ನಾಲ್ಕು ಸಾವಿರ ಹುದ್ದೆಗಳಿಗೆ ಈಗಾಗಲೇ ಜಿಲ್ಲಾ ಸಮಿತಿಗಳು ರಚನೆಯಾಗಿ ಅರ್ಜಿಗಳನ್ನು ಕರೆದು ಕೆಲವು ಅರ್ಜಿಗಳು ಪರಿಶೀಲನೆಯಾಗುತ್ತಿರುವ ಸಂದರ್ಭದಲ್ಲಿ ಮಾನ್ಯ ಆಚಾರ್‌ರವರ ಪ್ರಶ್ನೆಗೆ ಉತ್ತರಿಸಿದಂತೆ ಟಿಸಿಹೆಚ್. ಅಭ್ಯರ್ಥಿಗಳ ಚಳುವಳಿಯ ಮೇಲೆ ಮುಂದೆ ಹಾಕಬೇಕಾಗಿ ಬಂತು. ಈಗ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಅರ್ಧ ದಷ್ಟು ಹುದ್ದೆಗಳನ್ನು (ಈಗಾಗಲೇ ಜಿಲ್ಲಾ ಸಮಿತಿಗಳಲ್ಲಿ ಏನು ಅರ್ಜಿಕರೆದಿದ್ದಾರೆ ಅದನ್ನು) ಭರ್ತಿ ಮಾಡಬಹುದು ಉಳಿದರ್ಧವನ್ನು ಟಿಸಿಹೆಚ್. ಅರ್ಹತೆ ಪಡೆದವರಿಗೆ ಕೊಡಲು ಪರೀಕ್ಷಾ ಸಮಿತಿಯನ್ನು ಹೆಚ್ಚು ಮಾಡುವುದಕ್ಕೋಸ್ಕರ ನಿಯಮಗಳ ತಿದ್ದುಪಡಿ ಆಗಬೇಕು. ಅದನ್ನು ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡು ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಶಿಕ್ಷಕರು ಇಲ್ಲದಿದ್ದರೆ ಶಾಲೆ ನಡೆಯುತ್ತದೆಯೇ ? ಶಿಕ್ಷಕರು ಇರಲೇಬೇಕು. ಅವರನ್ನು ಟೆಂಪರರಿಯಾಗಿ ಅಥವಾ ಯಾವ ರೀತಿಯಾದರೂ ಮಾಡಿ ನೇಮಕ ಮಾಡಬೇಕು. ೪ ಸಾವಿರ ಹುದ್ದೆಗಳನ್ನು ಖಾಲಿ ಇಟ್ಟುಕೊಂಡಿರುವಾಗ ಯಾರು ಶಾಲೆಯನ್ನು ನಡೆಸುತ್ತಾರೆ? ಮಕ್ಕಳನ್ನು ನೋಡುವವರು ಯಾರು ?ಪೋಲೀಸ್, ಹೆಲ್ತ್ ಮತ್ತು ಎಜುಕೇಷನ್ ಈ ಮೂರು ಇಲಾಖೆಗಳಿಗೆ ಇಕಾನಮಿ ಆರ್ಡರ್‌ನ್ನು ರಿಲ್ಯಾಕ್ಸ್ ಮಾಡಿದ್ದೇನೆ ಎಂದು ಹಿಂದೆ ಮುಖ್ಯ ಮಂತ್ರಿಗಳು ಹೇಳಿದ್ದರು, ಅಂದಾಗ ಸರ್ಕಾರಕ್ಕೆ ಏನು ತೊಂದರೆ ಇದೆ? ಕಾಂಟ್ರಾಕ್ಟ್ ಬೇಸಿಸ್ ಮೇಲಾದರೂ ನೇಮಕ ಮಾಡಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬಹುದಾಗಿತ್ತು. ಅಥವಾ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರಿಗಾದರೂ ಹೇಳಿ ಶಾಲಾ ಮಕ್ಕಳಿಗೆ ಶಿಕ್ಷಕರು ಇರುವಂತೆ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಶಿಕ್ಷಕರನ್ನು ನೇಮಕ ಮಾಡದೆ ಇದ್ದ ಕಾರಣ ಅನೇಕ ಹಳ್ಳಿಗಳಲ್ಲಿ ಇವತ್ತಿನ ದಿವಸ ಶಾಲೆಗಳು ಮುಚ್ಚಿವೆ. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ವಿಶೇಷವಾಗಿ ಸಿಂಗಲ್ ಟೀಚರ್ ಇದ್ದಲ್ಲಿ, ಟೀಚರ್ ಹೋಗದಿದ್ದರೆ ಆ ಶಾಲೆಗೆ ರಜವೆ. ಮುಂದಿನ ಸಾರಿ ರಿಕ್ರೂಟ್‌ಮೆಂಟ್ ಕಮಿಟಿ ಮಾಡುತ್ತೇವೆ ಅನ್ನುವುದಕ್ಕಿಂತ ತಕ್ಷಣ ಕ್ರಮ ತೆಗೆದುಕೊಂಡು ರಿಕ್ರೂಟ್ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಆಗಲೇ ಹೇಳಿದ ಹಾಗೆ ಳ ಸಾವಿರ ಹುದ್ದೆಗಳಲ್ಲಿ ಅರ್ಧ ಭಾಗವನ್ನು ತುಂಬಲು ಆದೇಶ ಕಳುಹಿಸಲಾಗಿದೆ.

ಶ್ರೀ ಯು. ಭೂಪತಿ.—ಪೂರಾ ಭರ್ತಿ ಮಾಡಿ ಅರ್ಧ ಏಕೆ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.— ಮೊದಲು ಏನುಕ್ರಮ ತೆಗೆದುಕೊಂಡಿತ್ತು ಎಂದರೆ ೧೯೮೩ರಲ್ಲಿ ಒಂದು ತಿದ್ದುಪಡಿಯನ್ನು ಮಾಡಲಾಗಿತ್ತು, ಅದರಂತೆ ಟಿಸಿಹೆಚ್ ನಿರುದ್ಯೋಗಿಗಳಾಗಿದ್ದಾರೆಂದು ವಯೋಮಿತಿಯನ್ನು ಹೆಚ್ಚು ಮಾಡಿ ನೇಮಿಸಬೇಕೆಂದು ಮಾಡಿತ್ತು. ಈ ರಿಕ್ರೂಟ್‌ಮೆಂಟಿನಲ್ಲಿ ಅದನು ತೆಗೆದು ಹಾಕಿದೆವು. ಟಿಸಿಹೆಚ್. ಅಂದರೆ ಎಸ್.ಎಸ್.ಎಲ್.ಸಿ. ಓದುವ ಹೊತ್ತಿಗೆ ೧೬-೧೮ ವರ್ಷ ನಂತರ ಟಿಸಿಹೆಚ್.ಗೆ ಎರಡು ವರ್ಷ ಅಂದರೆ ೨೦ ವರ್ಷ. ಈಗ ೩೫ ವರ್ಷ ಆದವರನ್ನು ನೇಮಿಸಿ ಕೊಂಡರೆ (ಟಿಸಿಹೆಚ್. ಮಾಡಿ ೧೫-೨೦ ವರ್ಷ ಆದವರನ್ನು) ಅವರಿಗೆ ಓದಿದೆಲ್ಲ ಮರೆತುಹೋಗಿರುತ್ತದೆಂದು ಅದನ್ನು ಒಂದು ರೀತಿ ಪರಿಶೀಲನೆ ಮಾಡಿ ಅಂಥ ಉಪಾಧ್ಯಾಯರಿಂದ ತೊಂದರೆಯಾಗುತ್ತದೆಂದು ವಿದ್ಯಾ ಇಲಾಖೆಯು ಕ್ರಮ ಕೈಗೊಂಡಿತ್ತು. ಹೀಗಾಗಿ ಟಿಸಿಹೆಚ್. ಮಾಡಿದ್ದರೂ ವಯೋಮಿತಿ ಮೀರಿದವರಿಗೆ ಅವಕಾಶ ಮಾಡಿರಲಿಲ್ಲ. ಆದರೆ ನಿರುದ್ಯೋಗಿಗಳ ಒತ್ತಾಯ ಜಾಸ್ತಿಯಾಯಿತು. ಈಗ ಮತ್ತೆ ಪರಿಶೀಲನೆ ಮಾಡಿ ಅರ್ಧ ಭಾಗ ಅವರನ್ನು ತೆಗೆದುಕೊಳ್ಳುವಂಥೆ ನಿಯಮಗಳಿಗೆ ತಿದ್ದುಪಡಿ ಮಾಡುವ ತೀರ್ಮಾನವನ್ನು ಮುಂದಿನ ಸಂಪುಟದಲ್ಲಿ ತೆಗೆದುಕೊಂಡು ಆಜ್ಞೆ ಮಾಡೋಣವೆಂದು ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುವ ವಿಚಾರ ಪ್ರತಿ ವರ್ಷ ಚರ್ಚೆ ಮಾಡತಕ್ಕ ವಿಚಾರ. ಇದು ಇವತ್ತಿನದಲ್ಲ. ಹಿಂದೆ ಕೂಡ ರಾಚಯ್ಯ ನವರು ಶಿಕ್ಷಣ ಸಚಿವರಾಗಿದ್ದಾಗ ಡಿ.ಎಲ್.ಆರ್.ಸಿ. ಅಂದರೆ ಡಿಸ್ಟ್ರಿಕ್ಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿದಾಗ ಆ ಕಮಿಟಿಯವರ ಮೇಲೆ ಆಪಾದನೆಗಳು ಬಂತು ಎಂದು ಅದರ ಕಾರ್ಯವನ್ನು ಸ್ಥಗಿತಗೊಳಿಸಿದ್ದು ತವಂಗೆಲ್ಲಾ ಗೊತ್ತು. ಆ ರೀತಿ ಕಾರಣ ಇರಬಹುದು, ಮತ್ತೊಂದು ಕಾರಣ ಇರಬಹುದು. ಈಗಾಗಲೇ ನಾಲ್ಕು ತಿಂಗಳು ಕಳೆದು ಹೋಗಿದೆ. ರೂಲ್ಸ್ ಅಮೆಂಡ್ ಮಾಡಿ ಮಾಡುತ್ತೇವೆ ಅಂದರೆ ಕಷ್ಟವಾಗುತ್ತದೆ. ರೂಲ್ಸ್ ಮಾಡಿ, ಆಮೇಲೆ ಆರ್ಜಿ ಕರೆದು, ಇಂಟರ್‌ವ್ಯೂ ಮಾಡಿ, ಸೆಲೆಕ್ಟ್ ಮಾಡಿ, ಪೋಸ್ಟಿಂಗ್ ಆರ್ಡರ್ ಕೊಟ್ಟು ಶಿಕ್ಷಕರು ಪಾಠ ಹೇಳುವ ಹೊತ್ತಿಗೆ ಬಹಳ ದಿವಸಗಳಾಗುತ್ತವೆ. ಶಾಲೆಗಳ ಪರಿಸ್ಥಿತಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳ ಶಾಲೆಗಳಲ್ಲಿನ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಶಾಲೆ ನಡೆಯ ಬೇಕಾದರೆ ಶಿಕ್ಷಕರು ಇರಲೇಬೇಕು ಎಂದು ಹೇಳಿದರು. ಅದು ಕಾನೂನು. ಆದರೆ ಶಿಕ್ಷಕರು ಇಲ್ಲದೇ ಇರುವ ಶಾಲೆಗಳು ಈಗಲೂ ನಡೆಯುತ್ತಿವೆ.

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ನೇರವಾಗಿಯೇ ಹೇಳುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆ ಅಂದರೆ ಎಗ್ಸಿಕ್ಯುಟೀವ್ ಆರ್ಡರ್ ಮುಖಾಂತರ ಕಾಂಟ್ರಾಕ್ಟ್ ಬೇಸಿಸ್‌ನಲ್ಲೋ ಮತ್ತೊಂದರಲ್ಲೋ ತಕ್ಷಣ ಉಪಾಧ್ಯಾಯರ ನೇಮಕಾತಿ ಮಾಡಿ. ರೂಲ್ಸ್ ಅಮೆಂಡ್ ಮಾಡಿ ಮಾಡುತ್ತೇವೆಂದರೆ ಟೈಮ್ ಹಿಡಿಯುತ್ತದೆ. ಮಕ್ಕಳಿಗೆ ತೊಂದರೆಯಾಗುತ್ತದೆ. ಮಕ್ಕಳು ಫೇಲಾಗುತ್ತಾರೆ. ಶಾಲೆಗಳು ಪ್ರಾರಂಭವಾಗಿ 8 ತಿಂಗಳ ನಂತರ ಪಾಠ ಮಾಡು ಎಂದು ಹೇಳಿದರೆ ಮಾಡುವುದಕ್ಕಾಗುವುದಿಲ್ಲ. ಫೆಬ್ರುವರಿ ಮಾರ್ಚಿಗೆ ಪರೀಕ್ಷೆ ಬರುತ್ತದೆ. ಆನೇಕ ಮಕ್ಕಳು ಫೇಲಾಗುವ ಸಂಭವ ಇದೆ. ಇದಕ್ಕೆ ಸರ್ಕಾರ ಹೊಣೆ ಆಗಬೇಕಾಗುತ್ತದೆ, ಇಲ್ಲದಿದ್ದರೆ ಒಂದು ಕಾನೂನು ಮಾಡಲಿ. ನಮ್ಮ ತಪ್ಪಿನಿಂದ ಫೇಲಾಗುವುದರಿಂದ ನಾವು ಮಕ್ಕಳನ್ನು ಈ ವರ್ಷ ಪಾಸ್ ಮಾಡಿಬಿಡುತ್ತೇವೆ ಎಂದಾದರೂ ಮಾಡಿ. ಇಲ್ಲದಿದ್ದರೆ ಎಗ್ಸಿಕ್ಯುಟೀವ್ ಆರ್ಡರ್ ಹೊರಡಿಸಿ ತಕ್ಷಣ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಒಂದು ವಾರದಲ್ಲಿ ಅಪಾಯಿಂಟ್ ಮಾಡಿ. ನಿಮ್ಮ ಹತ್ತಿರ ಲಿಸ್ಟ್ ಇದೆ ಎಲ್ಲಾ ಇದೆ. ರೂಲ್ಸ್ ಅಮೆಂಡ್ ಮಾಡಿ ಅಪಾಯಿಂಟ್‌ಮೆಂಟ್ ಮಾಡುತ್ತೇವೆ ಎಂದು ಹೇಳುವುದು ಹಳೆಯ ಉತ್ತರ, ಹೊಸ ಉತ್ತರ ಅಲ್ಲ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈಗಾಗಲೇ ಹೇಳಿದಹಾಗೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಅರ್ಜಿಗಳನ್ನು ಕರೆದು ಪರಿಶೀಲನೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಸಿದ್ಧತೆಗಳು ನಡೆದಿತ್ತು. ಆದರೆ ಟಿ.ಸಿ.ಹೆಚ್. ಓದಿದವರ ಒತ್ತಾಯ ಬಂದಕಾರಣ ಮತ್ತೆ ಪರಿಶೀಲನೆ ಮಾಡಬೇಕಾಗಿ ಬಂತು. ಟಿ.ಸಿ.ಹೆಚ್. ಓದಿದವರಿಗೆ ಉಪಾಧ್ಯಾಯರ ಉದ್ಯೋಗ ಅಲ್ಲದೆ ಬೇರೆ ಉದ್ಯೋಗ ಸಿಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರನ್ನೇ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ತೆಗೆದುಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—ನಾಲ್ಕು ಸಾವಿರ ಜನರಲ್ಲಿ ಎರಡು ಸಾವಿರ ಜನರಿಗೆ ಈಗಾಗಲೇ ಆಜ್ಞೆ ಕಳುಹಿಸಿದೆ. ಆಯ್ಕೆ ಸಮಿತಿಯವರು ಅದನ್ನು ಪರಿಶೀಲನೆ ಮಾಡಿದ್ದಾರೆ. ಮಿಕ್ಕ ಅರ್ಧ

ಭಾಗದ ಜನರಿಗೆ ಮುಂದಿನ ಸಚಿವ ಸಂಪುಟದಲ್ಲಿ ಒಪ್ಪಿಗೆ ತೆಗೆದುಕೊಂಡು ನೇಮಕಾತಿ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ರಿಸರ್ವೇಷನ್ ಮತ್ತು ರೋಸ್ಟರ್ ಸಿಸ್ಟಮ್ ಫಾಲೋ ಮಾಡುತ್ತೀರಿ ತಾನೇ?

ಶ್ರೀ ಎಂ. ಚಂದ್ರಶೇಖರ್.—ಆದರ ಪ್ರಕಾರ ಮಾಡುತ್ತೇವೆ.

(ಹಲವಾರು ಸದಸ್ಯರು ಮತ್ತೆ ಉಪ ಪ್ರಶ್ನೆಗಳನ್ನು ಕೇಳಲು ಎದ್ದು ನಿಂತರು)

ಅಧ್ಯಕ್ಷರು.—ಈಗಾಗಲೇ ಅರ್ಧ ಘಂಟೆ ಆಯಿತು. ಐದು ಪ್ರಶ್ನೆ ಮಾತ್ರ ಮುಗಿದಿದೆ. ನಿಮಗೆ ಬೇಕಾದರೆ ಅರ್ಧ ಘಂಟೆ ಚರ್ಚೆಗೆ ನೋಟೀಸ್ ಕೊಡಿ. ಈಗ ಈ ಮ್ಯಾಟರ್ ಮುಗಿದಿದೆ. ತಾವು ಕೂಡ್ರಿ.

ಶ್ರೀ ಎ. ಎಂ. ಹಿಂಡಸಗೇರಿ.—ನಮ್ಮಲ್ಲಿ ಸಮಿತಿ ಮಾಡಿ ಅರ್ಜಿ ತೆಗೆದುಕೊಂಡು ಪರಿಶೀಲನೆ ಮಾಡಿದ್ದರು. ಅದನ್ನು ಈಗ ರದ್ದು ಮಾಡಿದ್ದಾರೆ,

ಅಧ್ಯಕ್ಷರು.—ಇದಿನಬ್ಬನವರೇ ತಾವು ಪ್ರಶ್ನೆ ಕೇಳಿ.

## ದಕ್ಷಿಣ ಕನ್ನಡ ಜಿಲ್ಲೆಯಂ ಕಡಲಂ ಕೊರೆತದ ಬಗ್ಗೆ

937 (3044) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕರಾವಳಿಯಲ್ಲಿ ಕಡಲು ಕೊರೆತದಿಂದ ಬಡವರಿಗೆ ಮತ್ತು ಮೀನುಗಾರರಿಗೆ ಭಾರೀ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಕಡಲು ಕೊರೆತ ತಡೆಯುವ ಸಲುವಾಗಿ ತಡೆಗೋಡೆ ನಿರ್ಮಾಣ ಮಾಡಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೇ?

ಇ) ಉಳ್ಳಾಲದಲ್ಲಿ ಈಗಾಗಲೇ ತುಂಬಾ ಕಷ್ಟನಷ್ಟ ಕಡಲು ಕೊರೆತದಿಂದ ಆಗಿದ್ದು, ಈ ವರ್ಷ ವಿಪರೀತ ಕಡಲು ಒಳಗೆ ಬಂದಿರುವುದರಿಂದ ತಡೆಗೋಡೆ ಕಟ್ಟಲು ಸರ್ಕಾರವು ಯಾವ ಆದೇಶ ನೀಡುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ತೆಗೆದುಕೊಂಡಿದೆ.

ಇ) ಈ ಕಾಮಗಾರಿಯ ಅಂದಾಜಿಗೆ ಮಂಜೂರಾತಿ ನೀಡಲಾಗಿದ್ದು, ಗುತ್ತಿಗೆದಾರರನ್ನೂ ಸಹ ನೇಮಕ ಮಾಡಲಾಗಿದೆ.

ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಕ್ಷರೆ, 'ಅ' ಪ್ರಶ್ನೆಗೆ ಉತ್ತರಿಸುತ್ತಾ ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ವಿಧಾನ ಮಂಡಲದಲ್ಲಿ ಪ್ರಸ್ತಾಪ ಮಾಡಿ ಕರಾವಳಿಯಲ್ಲಿ ತಡೆಗೋಡೆ ಹಾಕಬೇಕೆಂದು ಕೇಳುತ್ತಿದ್ದೇವೆ. ಆದರೆ ಅದನ್ನು ಮಾಡಿಲ್ಲ. ಕರಾವಳಿಯಲ್ಲಿ ಶಾಶ್ವತವಾದ ತಡೆಗೋಡೆ ಮಾಡುವ ಕೆಲಸ ಇನ್ನೂ ಪ್ರಾರಂಭವಾಗಿಲ್ಲದೇ ಇರುವುದು ನಿಜವಲ್ಲವೇ ?

ಶ್ರೀ ಹೆಚ್.ಡಿ. ದೇವೇಗೌಡ.—ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರೆ ಏನು ಎಂಬುದನ್ನು ಓದಿಬಿಡುತ್ತೇನೆ. The see coast near Ullal has been severely affected for a length of 150 metres during this year. The protective work in this area at a cost of Rs. 9.20 lakhs has been included in the Budget estimates of 1988-89 with a grant of Rs. 3 lakhs. The estimate for this work has been sanctioned and the agency also has been fixed. The work will be taken up after Monsoon.